# ನೀನಾಸಮ್

## ಶ್ರೀ ನೀಲಕಂಠೇಶ್ವರ ನಾಟ್ಯ ಸೇವಾ ಸಂಘ ರಿ.

ಹೆಗ್ಗೋಡು, ಸಾಗರ-ಕರ್ನಾಟಕ-೫೭೭೪೧೭

೨೦೧೦-೨೦೧೧ ಸಾಲಿನ ಆಡಳಿತ ವರದಿ ಮತ್ತು
ಆಡಿಟ್ ಆದ ಜಮಾ-ಖರ್ಚು,
ಆದಾಯ-ವೆಚ್ಚ, ಆಸ್ತಿ-ಜವಾಬ್ದಾರಿ ತಃಖ್ತೆಗಳು

೨೦೧೧

ವಾರ್ಷಿಕ ಸರ್ವಸದಸ್ಯರ ಮಹಾಸಭೆ

ದಿನಾಂಕ ೨೧ ಆಗಸ್ಟ್ ೨೦೧೧ ಭಾನುವಾರ

# ಶ್ರೀ ನೀಲಕಂಠೇಶ್ವರ ನಾಟ್ಯ ಸೇವಾ ಸಂಘ ರಿ.,
# ಹೆಗ್ಗೋಡು - ಸಾಗರ - ಶಿವಮೊಗ್ಗ ೫೭೭ ೪೧೭

## ದಿನಾಂಕ ೨೧-೦೮-೨೦೧೧ನೇ ಭಾನುವಾರ ವಾರ್ಷಿಕ ಸಕಲ ಸದಸ್ಯ ಮಹಾಸಭೆಯಲ್ಲಿ ಮಂಡಿಸುವ
## ವಾರ್ಷಿಕ ವರದಿ: ೨೦೧೦-೧೧

ಈ ಮಹಾಸಭೆಗೆ ಸಂಸ್ಥೆಯ ಸದಸ್ಯರುಗಳನ್ನೆಲ್ಲಾ ಹಾರ್ದಿಕವಾಗಿ ಸ್ವಾಗತಿಸುತ್ತಾ, ನಮ್ಮ ಆಡಳಿತ ಸಮಿತಿ' ಯು ಸಿದ್ಧಪಡಿಸಿರುವ ನಮ್ಮ ಸಂಸ್ಥೆಯ ೨೦೧೦-೧೧ನೇ ಸಾಲಿನ ವಾರ್ಷಿಕ ವರದಿಯನ್ನು ಮುಂದಿಡುತ್ತಿದ್ದೇನೆ.

**೧. ಸಂಸ್ಥೆಯ ಸ್ಥಾಪನೆ:**

ಶ್ರೀ ನೀಲಕಂಠೇಶ್ವರ ನಾಟ್ಯ ಸೇವಾ ಸಂಘ (ನೀನಾಸಮ್) ರಿ., ಸಂಸ್ಥೆಯು ೧೯೪೯ರಲ್ಲಿ ಸ್ಥಾಪಿತಗೊಂಡು, ಮುಂದೆ ೧೯೫೭ರಲ್ಲಿ ಕರ್ನಾಟಕ ಸೊಸೈಟಿ ರೆಜಿಸ್ಟ್ರೇಶನ್ ಆಕ್ಟ್ ಪ್ರಕಾರ ನೋಂದಣಿಗೊಂಡಿದೆ.
ನೋಂದಣಿ ಸಂಖ್ಯೆ: ನಂ. ೧೫೨೭: ೫೭-೫೮: ೪-೪-೨೯೫೭

**೨. ಸದಸ್ಯತ್ವ:**

ಈ ಸಂಸ್ಥೆಯಲ್ಲಿ ಆಜೀವ ಸದಸ್ಯ-ವಾರ್ಷಿಕ ಸದಸ್ಯ-ಗೌರವ ಸದಸ್ಯ ಎಂಬ ವರ್ಗಗಳಿವೆ. ೨೦೧೧-೧೨ ವರ್ಷಾಂತ್ಯಕ್ಕೆ ಸಂಸ್ಥೆಯಲ್ಲಿರುವ ಅಜೀವ ಸದಸ್ಯರ ಸಂಖ್ಯೆ: ಎಂಬತ್ತೆಂಟು. (ಒಟ್ಟು ೧೧೩, ಅದರಲ್ಲಿ ಈಗ ತೀರಿರುವರು ೨೫) ವಾರ್ಷಿಕ ಗೌರವ ಸದಸ್ಯರು ಯಾರೂ ಇಲ್ಲ.

**೩. ಸ್ಥಿರ-ಚರ ಆಸ್ತಿಗಳು:**

ನೀನಾಸಮ್ ರಂಗಶಿಕ್ಷಣ ಕೇಂದ್ರ, ನೀನಾಸಮ್ ತಿರುಗಾಟ, ನೀನಾಸಮ್ ಪ್ರತಿಷ್ಠಾನ, ನೀನಾಸಮ್ ಸಂಸ್ಕೃತಿ ಶಿಬಿರ ಇತ್ಯಾದಿ ಶಾಖೆಗಳ ಮೂಲಕ ತನ್ನ ಚಟುವಟಿಕೆಗಳನ್ನು ನಡೆಸುತ್ತಿರುವ ನಮ್ಮ ಸಂಸ್ಥೆಯು ಹೆಗ್ಗೋಡು ಹೊನ್ನೇಸರ ಭೀಮನಕೋಣೆ ಈ ಮೂರು ಗ್ರಾಮಗಳ ಸಂಧಿ ಸ್ಥಳದಲ್ಲಿ ತನ್ನ ಭೂ ನೀವೇಶನವನ್ನು ಹೊಂದಿದೆ. (ಹೆಗ್ಗೋಡು-ಹೊನ್ನೇಸರ ಗ್ರಾಮಗಳಲ್ಲಿ ಸು. ಒಂದೂವರೆ ಮತ್ತು ಭೀಮನಕೋಣೆ ಗ್ರಾಮದಲ್ಲಿ ಎರಡು ಹೀಗೆ ಒಟ್ಟು ಸು. ಮೂರೂವರೆ ಎಕರೆ ಭೂನಿವೇಶನ.) ಸು. ಒಂದೂವರೆ ಎಕರೆಯ ಎದುರಿನ ನಿವೇಶನದಲ್ಲಿ ಹೊಸದಾಗಿ ಕಟ್ಟಿದ ವಿಶಾಲ ನೇಪಥ್ಯ ಗೃಹವುಳ್ಳ ಶಿವರಾಮಕಾರಂತ ರಂಗಮಂದಿರವೂ, ಕಛೇರಿ ಕಟ್ಟಡ, ಬಸ್‌ಶೆಡ್, ರಂಗಶಿಕ್ಷಣ ಶಾಲೆಯ ಕಟ್ಟಡ, ಕ್ಯಾಂಟೀನ್ ಕಟ್ಟಡ, ಅತಿಥಿಗೃಹ ಕಟ್ಟಡ ಇತ್ಯಾದಿಗಳೂ ಜತೆಗೆ ಒಂದು ತೆರೆದ ಬಾವಿಯೂ ಒಂದು ಕೊಳವೆ ಭಾವಿಯೂ ಇದೆ. ಹಿಂಭಾಗದ ಎರಡು ಎಕರೆ ನಿವೇಶನದಲ್ಲಿ ಮುಖ್ಯವಾಗಿ ರಂಗಶಿಕ್ಷಣ ಕೇಂದ್ರಕ್ಕೆ ಸಂಬಂಧಿಸಿದ ಒಂದು ಸಭಾಭವನ, ಸಭಾಸದನ, ವಿದ್ಯಾರ್ಥಿನಿಯರು ಮತ್ತು ವಿದ್ಯಾರ್ಥಿಗಳ ಎರಡು ವಸತಿ ಕಟ್ಟಡಗಳು, ಒಂದು ಗ್ರಂಥಾಲಯ-ಕಾರ್ಯಾಲಯ ಕಟ್ಟಡ ಮತ್ತು ಒಂದು ಬಯಲು ರಂಗಭೂಮಿ ಇದೆ. ಈ ಕಟ್ಟಡಗಳಿಗೆ ಮತ್ತು ನಮ್ಮ ವಿವಿಧ ಶಾಖೆಗಳ ಚಟುವಟಿಕೆಗಳಿಗೆ ಅಗತ್ಯವಾಗುವ ಪೀಠೋಪಕರಣಗಳು ಮತ್ತು ಸಲಕರಣೆಗಳು, ರಂಗವ್ಯವಸ್ಥೆ-ಪ್ರಕಾಶ ವ್ಯವಸ್ಥೆ-ಧ್ವನಿ ವ್ಯವಸ್ಥೆ-ವೇಷಭೂಷಣ ಇತ್ಯಾದಿ, ಉಪಕರಣಗಳು, ಗ್ರಂಥಸಂಗ್ರಹ ದೃಶ್ಯಶ್ರವ್ಯ ವಸ್ತು ಸಲಕಲಣೆ ಇತ್ಯಾದಿಗಳು, ಹಾಸ್ಟೆಲ್ ಅತಿಥಿಗೃಹಗಳಿಗೆ ಸಂಬಂಧಿಸಿದ ಅಡುಗೆ ಸಲಕರಣೆ-ಹಾಸಿಗೆ ಬಟ್ಟೆ ಸಂಗ್ರಹ ಇತ್ಯಾದಿಗಳು, ಎರಡು ಜನರೇಟರ್-ಎರಡು ಪಂಪಸೆಟ್ ಮತ್ತು ಒಂದು ಬಸ್ಸು ಇತ್ಯಾದಿಗಳು ನಮ್ಮ ಸಂಸ್ಥೆಯ ಚರ ಆಸ್ತಿಗಳಲ್ಲಿ ಸೇರಿವೆ.

**೪. ಆಡಳಿತ ಮಂಡಳಿ:**

ತಾ ೦೫-೦೯-೨೦೧೦ನೇ ದಿನದ ನಮ್ಮ ಸಂಸ್ಥೆಯ ವಾರ್ಷಿಕ ಸಕಲಸದಸ್ಯ ಸಭೆಯು ೨೦೧೦-೧೧ನೇ ಸಾಲಿನ ಆಡಳಿತ ನಿರ್ವಹಣೆಗಾಗಿ ಕೆಳಕಂಡ 'ಆಡಳಿತ ಸಮಿತಿ'ಯನ್ನು ಆಯ್ಕೆ ಮಾಡಿತು.
ಶ್ರೀಯುತರುಗಳಾದ:

| | |
|---|---|
| ೧. ಹೆಚ್.ವಿ. ಚಂದ್ರಶೇಖರ್ | ಅಧ್ಯಕ್ಷ |
| ೨. ಕೆ.ವಿ. ಅಕ್ಷರ | ಕೋಶಾಧ್ಯಕ್ಷ |
| ೩. ಟಿ. ನಾರಾಯಣಭಟ್ಟ | ಕಾರ್ಯದರ್ಶಿ |

೪. ಎ.ಆರ್. ಶ್ರೀಧರಭಟ್ ಸದಸ್ಯ
೫. ಜಿ.ಎಸ್. ಚಂದ್ರಶೇಖರ ಸದಸ್ಯ
೬. ಹೆಚ್.ಎಸ್. ಸತ್ಯನಾರಾಯಣರಾವ್ ಭಾಗಿ ಸದಸ್ಯ
೭. ಕೆ. ವೆಂಕಟೇಶ್ ಸದಸ್ಯ
೮. ವಿ.ಎಂ. ಗುರುಮೂರ್ತಿ ಸದಸ್ಯ
೯. ಎಂ.ಎಂ. ಕೃಷ್ಣಮೂರ್ತಿ ಸದಸ್ಯ
೧೦. ಹೆಚ್. ಎಸ್. ಸತ್ಯನಾರಾಯಣರಾವ್ ಹಳೇಮನೆ ಸದಸ್ಯ
೧೧. ಎ.ಎಸ್. ನಾಗೇಶ್ ರಾವ್ ಸದಸ್ಯ
೧೨. ಹೆಚ್.ಎಸ್. ಪ್ರಸನ್ನ ಸದಸ್ಯ
೧೩. ಶ್ರೀಪಾದ ಟಿ. ಭಾಗವತ್ ಸದಸ್ಯ
೧೪. ಶ್ರೀಮತಿ ಶೈಲಜಾ ಪ್ರಕಾಶ್ ಸದಸ್ಯೆ
೧೫. ಶ್ರೀಮತಿ ಶ್ಯಾಮಲಾ ಕೃಷ್ಣಮೂರ್ತಿ ಸದಸ್ಯೆ

ಈ ಅವಧಿಯಲ್ಲಿ ಒಂದು ಮಹಾಸಭೆ ಹಾಗೂ ಎಂಟು ಆಡಳಿತ ಮಂಡಲಿಯ ಸಭೆಗಳನ್ನು ನಡೆಸಿದೆ ಮತ್ತು ಆಡಳಿತವನ್ನು ನಿರ್ವಹಿಸಿಕೊಂಡು ಬಂದಿದೆ.

**೫. ನೀನಾಸಮ್ ರಂಗಶಿಕ್ಷಣ ಕೇಂದ್ರ:**

ಕರ್ನಾಟಕದಲ್ಲಿ ಕನ್ನಡದಲ್ಲೇ ರಂಗಶಿಕ್ಷಣವನ್ನು ನೀಡುವ ಅಪೇಕ್ಷೆಯಿಂದ ನಮ್ಮ ನೀನಾಸಮ್ ರಂಗಶಿಕ್ಷಣ ಕೇಂದ್ರವು ೧೯೮೦ರಲ್ಲಿ (೧೯೮೦-೮೧ಸಾಲು) ಕೆಲಮಟ್ಟಿಗೆ ದೆಹಲಿ ರಾಷ್ಟ್ರೀಯ ನಾಟಕ ಶಾಲೆಯನ್ನು ಮಾದರಿಯಾಗಿಟ್ಟುಕೊಂಡು ಪ್ರಾರಂಭವಾಯಿತು. ಆಗಿನಿಂದ ಈ ಈತನಕ, ಈ ಕೇಂದ್ರವು ಆಸಕ್ತ ಕನ್ನಡ ವಿದ್ಯಾರ್ಥಿಗಳಿಗೆ (ಪ್ರತಿವರ್ಷ ಸು. ೧೫-೨೦) ಒಂದು ವರ್ಷದ ಶಿಕ್ಷಣವನ್ನು ನೀಡುತ್ತ ಬಂದಿದೆ. ಪ್ರತಿ ಜುಲೈ ೧೫ರಿಂದ ಮುಂದಿನ ಮೇ ೧೫ರ ತನಕ ನಡೆಯುವ ಶಿಕ್ಷಣದಲ್ಲಿ ರಂಗಭೂಮಿಗೆ ಸಂಬಂಧಿಸಿದ ಸಿದ್ಧಾಂತ ಪ್ರಯೋಗಗಳೆರಡರಲ್ಲೂ ಶಿಕ್ಷಣ ಕೊಡಲಾಗುತ್ತಿದೆ. ಇದು ವಸತಿಶಿಕ್ಷಣ ಶಾಲೆಯಾಗಿದ್ದು ವಿದ್ಯಾರ್ಥಿಗಳು ಹತ್ತು ತಿಂಗಳಕಾಲ, ಯಾವುದೇ ಸಾಮಾನ್ಯ ರಜೆಗಳಿಲ್ಲದೆ ವಾರದ ಎಲ್ಲಾ ದಿನಗಳಲ್ಲೂ ಸು. ೧೨-೧೩ ಗಂಟೆ ಅಭ್ಯಾಸ ನಡೆಸುತ್ತಾರೆ. ಕರ್ನಾಟಕ ರಾಜ್ಯಸರ್ಕಾರವು ಈ ರಂಗಶಿಕ್ಷಣ ಕೇಂದ್ರಕ್ಕೆ ಮನ್ನಣೆಯನ್ನು ನೀಡಿದ್ದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ಖಾಯಂ ಆದ ನಿಶ್ಚಿತ ಅನುದಾನವನ್ನು ನೀಡುತ್ತಿದೆ. ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಲಿಯು ಈ ಕೇಂದ್ರದ ವಿದ್ಯಾರ್ಥಿಗಳಿಗೆ ಪ್ರತಿವರ್ಷವೂ ಪರೀಕ್ಷೆಯನ್ನು ನಡೆಸಿ ಉತ್ತೀರ್ಣರಾದವರಿಗೆ 'ಡಿಪ್ಲೋಮ್ ಇನ್ ಥಿಯೇಟರ್ ಆರ್ಟ್ಸ್' ಎಂಬ ಡಿಪ್ಲೋಮಾವನ್ನು ನೀಡುತ್ತಿದೆ. ಈ ಶಿಕ್ಷಣಕ್ಕೆ ಬೇಕಾದ ಕಟ್ಟಡ ಸಲಕಸಣೆ ಉಪಕರಣ ಗ್ರಂಥಾಲಯ ಮುಂತಾದವನ್ನು ಶಿಕ್ಷಕ ಸಿಬ್ಬಂದಿಯನ್ನೂ ಈ ಕೇಂದ್ರವು ಸಜ್ಜುಗೊಳಿಸಿಕೊಂಡಿದೆ. ಇದಲ್ಲದೆ ರಾಜ್ಯದ ಒಳಗಿನಿಂದ ಮತ್ತು ಹೊರಗಿನಿಂದ ತಜ್ಞರು ಬಂದು ಶಿಕ್ಷಣದ ನೆರವು ನೀಡುತ್ತಿದ್ದಾರೆ.

೨೦೧೧ ಮೇ ವರೆಗೆ ನಮ್ಮ ಕೇಂದ್ರದಲ್ಲಿ ತರಬೇತಿ ಹೊಂದಿರುವ ವಿದ್ಯಾರ್ಥಿಗಳ ಸಂಖ್ಯೆ ೪೭೨ (೧೨೭ ವಿದ್ಯಾರ್ಥಿನಿಯರು ಮತ್ತು ೩೪೫ ವಿದ್ಯಾರ್ಥಿಗಳು) ಇವರು ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲೂ ನೆಲೆಸಿದವರಾಗಿದ್ದು ತಮ್ಮ ತಮ್ಮ ಅವಕಾಶಕ್ಕನುಗುಣವಾಗಿ ರಂಗಚಟುವಟಿಕೆಗಳಲ್ಲಿ ತೊಡಗಿಕೊಂಡು ಒಟ್ಟೂ ಕರ್ನಾಟಕದಲ್ಲಿ ಗಣನೀಯ ಕೆಲಸ ಮಾಡುತ್ತಿದ್ದಾರೆ.

ನೀನಾಸಮ್ ರಂಗಶಿಕ್ಷಣ ಕೇಂದ್ರದ ೨೦೧೦-೧೧ನೇ ಸಾಲಿನ ಆಡಳಿದತ ಬಗ್ಗೆ ಆಯ್ಕೆಯಾಗಿದ್ದ ಆಡಳಿತ ಸಮಿತಿ ಹೀಗಿದೆ
ಶ್ರೀಯುತರುಗಳಾದ

೧. ಹೆಚ್.ವಿ. ಚಂದ್ರಶೇಖರ್ ಅಧ್ಯಕ್ಷರು
೨. ಕೆ.ವಿ. ಅಕ್ಷರ ನಿರ್ದೇಶಕರು
೩. ಟಿ. ನಾರಾಯಣಭಟ್ಟ ಕಾರ್ಯದರ್ಶಿ
೪. ಕೆ.ಜಿ. ಮಹಾಬಲೇಶ್ವರ (ಪ್ರಭಾರ ಪ್ರಾಂಶುಪಾಲರು)
೫. ಟಿ.ಪಿ. ಅಶೋಕ ಸದಸ್ಯರು
೬. ಎ.ಆರ್. ಶ್ರೀಧರಭಟ್ಟ ಸದಸ್ಯರು
೭. ಬಿ.ಆರ್. ವೆಂಕಟರಮಣ ಐತಾಳ ಸದಸ್ಯರು
೮. ಶ್ರೀಮತಿ ಲಲಿತಾ ಜಾದವ್ ಸದಸ್ಯರು

ರಂಗಶಿಕ್ಷಣ ಕೇಂದ್ರದ ಪ್ರಸ್ತುತ 'ಕಾರ್ಯವರ್ಗ' ಹೀಗಿದೆ.

| | |
|---|---|
| ೧. ಕೆ.ವಿ. ಅಕ್ಷರ | ನಿರ್ದೇಶಕರು |
| ೨. ಮಹಾಬಲೇಶ್ವರ ಕೆ.ಜಿ. | ಪ್ರಭಾರಿ ಪ್ರಾಂಶುಪಾಲರು |
| ೩. ವೆಂಕಟರಮಣ ಐತಾಳ ಬಿ.ಆರ್ | ಅಧ್ಯಾಪಕರು |
| ೪. ಗಣೇಶ ಎಂ | ಅಧ್ಯಾಪಕರು |
| ೫. ಮಂಜಪ್ಪ ಪಿ.ಎ. | ನೃತ್ಯ ಪ್ರದರ್ಶಕರು |
| ೬. ಶ್ರೀಧರ ನಾಗೇಶ ಶ್ಯಾನುಭಾಗ್ | ಸಂಗೀತ ಪ್ರದರ್ಶಕರು * |
| ೭. ಫಣಿಯಮ್ಮ ಹೆಚ್.ಎಸ್. | ದೈಹಿಕ ಪ್ರದರ್ಶಕರು |
| ೮. ಅರುಣ ಕುಮಾರ್ ಎಂ | ಕಲೆ ಪ್ರದರ್ಶಕರು |
| ೯. ಹಿರಿಯಣ್ಣ ಭಟ್ಟ ಬಿ.ಎಸ್. | ಗುಮಾಸ್ತ ಕಂ ಬೆರಳಚ್ಚುಗಾರರು |
| ೧೦. ವಿಶ್ವನಾಥ ಭಟ್ಟ ಸಿ.ಆರ್ | ಗ್ರಂಥಪಾಲಕರು |
| ೧೧. ಬಂಗಾರಪ್ಪ | ಸಹಾಯಕರು |
| ೧೨. ವಿಠ್ಠಲ | ಗೃಹ ನಿರ್ವಾಹಕರು |

* ರಸ್ತೆ ಅಪಘಾತದಲ್ಲಿ ತೀವ್ರ ಸ್ವರೂಪದ ಗಾಯದಿಂದಾಗಿ ಅವರು ದೀರ್ಘಕಾಲಿಕ ರಜೆಯಲ್ಲಿದ್ದಾರೆ.

**ನೀನಾಸಮ್ ರಂಗಶಿಕ್ಷಣ ಕೇಂದ್ರದ ಚಟುವಟಿಕೆಗಳು:** ಈ ಸಾಲಿನಲ್ಲಿ ರಂಗಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳು ಯೂರಿಪಿಡೀಸನ 'ಮೀಡಿಯ' (ಅನು: ಕೆ. ಮರುಳಸಿದ್ದಪ್ಪ, ನಿ: ಮಂಜು ಕೊಡಗು), ದ.ರಾ. ಬೇಂದ್ರೆಯವರ 'ಸಖೀಗೀತ' (ವಾಚಿಕವಿನ್ಯಾಸ: ಬಿ.ಆರ್. ವಿ. ಐತಾಳ), ಚಂದ್ರಶೇಖರ ಕಂಬಾರರ 'ಸಾಂಬಶಿವ ಪ್ರಹಸನ' (ನಿ: ಗೋಪಾಲಕೃಷ್ಣ ದೇಶಪಾಂಡೆ) ವೋಲೆ ಷೋಯಿಂಕನ 'ಸಾವು ಮತ್ತು ರಾಜನ ಕುದುರೆಸವಾರ' (ಅನು: ಜ.ನಾ. ತೇಜಶ್ರೀ, ನಿ: ರಾಜೀವ ಕೃಷ್ಣನ್), ಸು.ರಂ. ಎಕ್ಕುಂಡಿಯವರ ಕವಿತೆಗಳನ್ನು ಆಧರಿಸಿದ 'ನಮಗೂ ನಿಮಗೂ ಹೃದಯದ ಬಾಗಿಲು ತೆರೆದವರೇ ಇಲ್ಲ' (ನಿ: ಅಕ್ಷರ ಕೆ.ವಿ.) ಹಾಗೂ 'ಎತ್ತ ಹಾರಿದೆ ಹಂಸ' (ರಚನೆ ಮತ್ತು ನಿರ್ದೇಶನ: ರಘುನಂದನ) ಎಂಬ ನಾಟಕ ಪ್ರಯೋಗವನ್ನು ಸಿದ್ಧಪಡಿಸಿ ಪ್ರದರ್ಶಿಸಿದರು. ಮೇ ೯ರಿಂದ ೧೬ರವರೆಗೆ ವಾರ್ಷಿಕ ಪರೀಕ್ಷೆಗಳು ಹಾಗೂ ಮೇ ೧೧ರಿಂದ ೧೫ರವರೆಗೆ ಈ ಸಾಲಿನ ನಾಟಕೋತ್ಸವ ನಡೆದವು. ಈ ನಾಟಕೋತ್ಸವದ ಸಮಯದಲ್ಲಿಯೆ ಶಿವಮೊಗ್ಗದ ಅಭಿವ್ಯಕ್ತ ತಂಡದವರು ನಿಕೊಲಾಯ್ ಗೊಗೋಲ್‌ನ ಕತೆಯನ್ನು ಆಧರಿಸಿದ ' ಮಹಾಬಲಯ್ಯನ ಕೋಟು' (ನಿ: ಗೌರೀಶಂಕರ್) ಎಂಬ ನಾಟಕವನ್ನು ಇಲ್ಲಿ ಪ್ರದರ್ಶಿಸಿದರು. ಕಳೆದ ಕೆಲವು ವರ್ಷಗಳಿಂದ ರಂಗಶಿಕ್ಷಣ ಕೇಂದ್ರವು ಮೇ - ಜೂನ್ ತಿಂಗಳ ಅವಧಿಯಲ್ಲಿ ಆಸಕ್ತರಿಗಾಗಿ ಒಂದು ತಿಂಗಳ ಬೇಸಿಗೆ ರಂಗಶಿಬಿರವನ್ನು ನಡೆಸಿಕೊಂಡುಬಂದಿದೆ. ಈ ಸಾಲಿನಲ್ಲಿಯೂ ಈ ಶಿಬಿರವನ್ನು ನಡೆಸಲಾಗಿತ್ತು. ಶ್ರೀ ರಘುನಂದನ ಅವರ ನಿರ್ದೇಶನದಲ್ಲಿ ನಡೆದ ಈ ಶಿಬಿರದಲ್ಲಿ ೨೫ ಮಂದಿ ಆಸಕ್ತರು ಭಾಗವಹಿಸಿದ್ದರು. ಶಿಬಿರದ ಅಂಗವಾಗಿ 'ಸೀಮಾಚ್ಛೇದ' (ನಿ: ಮಂಜುನಾಥ ಎಲ್. ಬಡಿಗೇರ) ಮತ್ತು 'ಸತ್ರೂ ಅಂದ್ರೆ ಸಾಯ್ತಾರ ?' (ನಿ: ಎಂ.ಪಿ.ಎಂ. ವೀರೇಶ) ಎಂಬ ಎರಡು ನಾಟಕಗಳನ್ನು ಸಿದ್ಧಪಡಿಸಿ ಪ್ರದರ್ಶಿಸಲಾಯಿತು.

೨೦೧೦-೧೧ನೇ ಸಾಲಿನಲ್ಲಿ ರಂಗಶಿಕ್ಷಣ ಕೇಂದ್ರದಲ್ಲಿ ತರಬೇತಿ ಪಡೆದ ವಿದ್ಯಾರ್ಥಿಗಳು – ೨೦ (ವಿದ್ಯಾರ್ಥಿನಿಯರು - ವಿದ್ಯಾರ್ಥಿಗಳು ಇವರಲ್ಲಿ ಪರೀಕ್ಷೆಗೆ ಕುಳಿತರವರು ೧೯ ಮಂದಿ, ಹದಿನೆಂಟು ಮಂದಿಯು ಪ್ರಥಮ ದರ್ಜೆಯಲ್ಲಿ ಒಬ್ಬರು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

**ಕೃತಜ್ಞತೆ:**

ಮುಖ್ಯವಾಗಿ ಕರ್ನಾಟಕ ಸರ್ಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ, ಕರ್ನಾಟಕ ನಾಟಕ ಅಕಾಡಮಿ, ಕೇಂದ್ರ ಸಂಗೀತ ನಾಟಕ ಅಕಾಡಮಿ, ರಾಷ್ಟ್ರೀಯ ನಾಟಕ ಶಾಲೆ, ನವದೆಹಲಿ, ಮತ್ತು ಅದರ ಬೆಂಗಳೂರಿನ ಪ್ರಾದೇಶಿಕ ಕೇಂದ್ರ, ಹಿವೋಸ್ ಸಂಸ್ಥೆಬೆಂಗಳೂರು, ಐ.ಎಫ್.ಎ ಬೆಂಗಳೂರು ಇತ್ಯಾದಿ ಸಂಸ್ಥೆಗಳು, ರಂಗಶಿಕ್ಷಣ ಕೇಂದ್ರದಲ್ಲಿ ನೆರವಾದ ಕರ್ನಾಟಕದ ಮತ್ತು ಹೊರಗಿನ ಹಲವು ರಂಗತಂಡದವರು ಮುಂತಾಗಿ ಅನೇಕಾನೇಕ ವ್ಯಕ್ತಿ ಸಂಸ್ಥೆಗಳಿಂದ ನಮ್ಮ ರಂಗಶಿಕ್ಷಣ ಕೇಂದ್ರವು ಬಗೆ ಬಗೆಯ ಅತ್ಯುಪಯುಕ್ತ ನೆರವುಗಳನ್ನು ಪಡೆದಿದೆ ಮತ್ತು ಅದಕ್ಕಾಗಿ ತನ್ನ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತದೆ.

**೬. ನೀನಾಸಮ್ ತಿರುಗಾಟ**

೧೯೮೫ರಲ್ಲಿ ನೀನಾಸಮ್ ರಂಗಶಿಕ್ಷಣ ಕೇಂದ್ರದ ಮುಂದುವರಿಕೆ ಮತ್ತು ವಿಸ್ತರಣೆಯ ರೂಪದಲ್ಲಿ 'ನೀನಾಸಮ್ ತಿರುಗಾಟ' ಎನ್ನುವ

ಕರ್ನಾಟಕ ಕೇಂದ್ರಿತವಾದ ತರಬೇತಾದ ವೃತ್ತಿಬದ್ಧರ ಸಂಚಾರಿ ರಂಗತಂಡವನ್ನು ಸಂಘಟಿಸಲಾಯಿತು. ಈ ತಂಡವು ಪ್ರತಿವರ್ಷವೂ ಹೊಸದಾಗಿ (ಹಳಬರ ಜತೆ ಹೊಸಬರನ್ನು ಕೂಡಿಸಿಕೊಳ್ಳುತ್ತ) ಸಂಘಟಿತವಾಗುತ್ತದೆ. ತಂಡದಲ್ಲಿ ಬಹುಪಾಲು ನಮ್ಮ ರಂಗಶಿಕ್ಷಣ ಕೇಂದ್ರದ ಹಳೆಯ ವಿದ್ಯಾರ್ಥಿಗಳನ್ನೇ ಪೂರ್ಣಾವಧಿಯಾಗಿ ವೇತನದಮೇಲೆ ನೇಮಿಸಿಕೊಳ್ಳಲಾಗುತ್ತದೆ. ತಂಡದಲ್ಲಿ ಒಟ್ಟೂ ಸು. ೨೦ ಮಂದಿ ನಟನಟಿ ತಂತ್ರಜ್ಞರಿರುತ್ತಾರೆ.

'ನೀನಾಸಮ್ ತಿರುಗಾಟ'ವು ಇಪ್ಪತ್ತಾರು ವರ್ಷಗಳನ್ನು ಪೂರೈಸಿ ಈಗ ಇಪ್ಪತ್ತೇಳನೇ ವರ್ಷಕ್ಕೆ ಕಾಲಿಟ್ಟಿದೆ. ಈ ಇಪ್ಪತ್ತಾರು ವರ್ಷಗಳ ಒಟ್ಟೂ ಅವಧಿಯಲ್ಲಿ 'ತಿರುಗಾಟ'ವು ೮೫ ಪ್ರಯೋಗಗವನ್ನು ಸಿದ್ಧಪಡಿಸಿದೆ. ಇವುಗಳಲ್ಲಿ ಮೂಲ ಕನ್ನಡ ನಾಟಕಗಳು ೨೮, ಕನ್ನಡ ಕೃತಿಗಳ ರೂಪಾಂತರಗಳು ೮, ಭಾರತೀಯ ನಾಟಕಗಳು ೧೯, ಪಾಶ್ಚಾತ್ಯ ಅನುವಾದಗಳು ಮತ್ತು ರೂಪಾಂತರಗಳು ೩೦. ಈ ಒಟ್ಟೂ ಅವಧಿಯಲ್ಲಿ ೩೯೮ ಮಂದಿ ನಟ ನಟಿ ತಂತ್ರಜ್ಞರು ಇಲ್ಲಿ ದುಡಿದಿದ್ದಾರೆ. ಇವರಲ್ಲಿ ಬಹುಪಾಲು ನಮ್ಮ ರಂಗಶಿಕ್ಷಣ ಕೇಂದ್ರದಲ್ಲಿ ತರಬೇತಿಕೊಂಡವರೇ ಆಗಿದ್ದು, ಕರ್ನಾಟಕದ ಎಲ್ಲಾ ಜಿಲ್ಲೆಗಳಿಂದ ಬಂದವರಾಗಿದ್ದಾರೆ. ಈ ವರ್ಷಗಳಲ್ಲಿ ತಿರುಗಾಟವು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ಕೂಡಿದ ಒಟ್ಟು ೩೬೧ ಊರುಗಳಲ್ಲಿ ಪ್ರದರ್ಶನ ನೀಡಿದೆ. ಇವುಗಳಲ್ಲಿ ೨೫೧ ಊರುಗಳು ತಾಲ್ಲೂಕು ಕೇಂದ್ರ ಅಥವಾ ಅದಕ್ಕಿಂತ ಸಣ್ಣ ಊರುಗಳು. ಈ ವರ್ಷಗಳಲ್ಲಿ 'ತಿರುಗಾಟ' ವು ಕರ್ನಾಟಕದ ಎಲ್ಲಾ ಜಿಲ್ಲೆಗಳು ಸೇರಿದಂತೆ, ಒಟ್ಟು ೨,೩೯,೯೦೦ ಕಿ.ಮೀ. ಗಳಷ್ಟು ಪ್ರವಾಸಮಾಡಿ ೩೪೩೪ ಪ್ರದರ್ಶನಗಳನ್ನು ಕೊಟ್ಟಿದೆ. ಈ ಪ್ರದರ್ಶನಗಳನ್ನು ವೀಕ್ಷಿಸಿದ ಪ್ರೇಕ್ಷಕರ ಒಟ್ಟು ಸಂಖ್ಯೆ ಅಂದಾಜು ೨೦.೨೭ ಲಕ್ಷ. ಈ ಇಪ್ಪತ್ತಾರು ವರ್ಷಗಳ ಅವಧಿಯಲ್ಲಿ 'ತಿರುಗಾಟ' ಕಾರ್ಯಕ್ರಮಕ್ಕೆ ಆಗಿರುವ ಒಟ್ಟು ವೆಚ್ಚ ಸು. ೨೪೭ ಲಕ್ಷರೂಪಾಯಿಗಳು. ವೆಚ್ಚದಲ್ಲಿ ಅರ್ಧ ಭಾಗ ತಂಡದ ಸದಸ್ಯರ ವೇತನಕ್ಕಾಗಿ ವೆಚ್ಚವಾಗಿದೆ. ಈ ಅವಧಿಯಲ್ಲಿ ದೊರಕಿದ ಆದಾಯ ಹೀಗಿದೆ. ಕೇಂದ್ರ ಸರ್ಕಾರದಿಂದ ಅನುದಾನ ೧೨೩ ಲಕ್ಷ , ಜಾಹೀರಾತು ಸು. ೧೬ಲಕ್ಷ- ಪ್ರದರ್ಶನಗಳಿಂದ ನೇರ ಬಂದದ್ದು ಸು. ೧೦೮ ಲಕ್ಷ.

'ನೀನಾಸಮ್ ತಿರುಗಾಟ'ದ ೨೦೧೦-೧೧ನೇ ಸಾಲಿನ ಆಡಳಿತದ ಬಗ್ಗೆ ಆಯ್ಕೆಯಾಗಿದ್ದ 'ಆಡಳಿತ ಸಮಿತಿ' ಹೀಗಿದೆ.
ಶ್ರೀಗಳಾದ

| | |
|---|---|
| ೧. ಹೆಚ್. ವಿ. ಚಂದ್ರಶೇಖರ್ | ಅಧ್ಯಕ್ಷರು |
| ೨. ಅಕ್ಷರ ಕೆ.ವಿ. | ಕೋಶಾಧ್ಯಕ್ಷರು |
| ೩. ಟಿ. ನಾರಾಯಣ ಭಟ್ಟ | ಕಾರ್ಯದರ್ಶಿ |
| ೪. ಶ್ರೀಪಾದ ಟಿ. ತಿರುಗಾಟ | ಸಂಚಾಲಕರು |
| ೫. ಟಿ.ಪಿ. ಅಶೋಕ | ಸದಸ್ಯರು |
| ೬. ಪೂರ್ಣಿಮಾ ಕೆ.ಎಸ್. | ಸದಸ್ಯರು |

೨೦೧೧ರ ಮಾರ್ಚ್ ಕೊನೆಗೆ ಅಂತ್ಯಗೊಂಡ ತಿರುಗಾಟ ೨೦೧೦ರ ಮೊದಲ ಹಂತದ ನಾಟಕಗಳು.' ಶೂದ್ರ ತಪಸ್ವಿ' ರಚನೆ: ಕುವೆಂಪು, ನಿರ್ದೇಶನ ಮಂಜುನಾಥ ಎಲ್. ಬಡಿಗೇರ, 'ಒಥೆಲೋ' ರಚನೆ: ಶೇಕ್ಸ್‌ಪಿಯರ್, ನಿರ್ದೇಶನ ಜಹಾನ್ ಮಣೆಕ್ ಷಾ ಮತ್ತು ಈ ಸಾಲಿನ ಮರುತಿರುಗಾಟ ನಾಟಕ 'ನೀರಿನ ನಿಲುತಾಣ' ರಚನೆ: ಓಟೋ ಶೊಗೊ, ನಿರ್ದೇಶನ ಶಂಕರ್ ವೆಂಕಟೇಶ್ವರನ್. ಮೊದಲ ಹಂತದ ತಿರುಗಾಟವು ಅಕ್ಟೋಬರ್ ನಿಂದ ಮಾರ್ಚ್‌ವರಗೆ ನಡೆಯಿತು ಹಾಗೂ ಈ ಸಾಲಿನ ಮರುತಿರುಗಾಟವು ಏಪ್ರಿಲ್ ಮೇನಲ್ಲಿ ನಡೆಯುವುದು.

**ಕೃತಜ್ಞತೆ:**

ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಸಚಿವಾಲಯದ ಸಂಸ್ಕೃತಿ ಇಲಾಖೆ, ಇಂಟೆಲ್, ಕರ್ಣಾಟಕ ಬ್ಯಾಂಕ್, ಕರ್ನಾಟಕ ರಾಜ್ಯ ಸರ್ಕಾರ ಕೇಂದ್ರ ಸಂಗೀತ ನಾಟಕ ಅಕ್ಾಡಮಿ, ರಾಜ್ಯ ನಾಟಕ ಅಕಾಡಮಿ, ತಿರುಗಾಟ ನಾಟಕಗಳ ತಯಾರಿಗಾಗಿ ಶ್ರಮಿಸಿದ ರಾಜ್ಯ ಮತ್ತು ರಾಜ್ಯದ ಹೊರಗಿನ ಅನೇಕ ನಿರ್ದೇಶಕರು, ತಂತ್ರಜ್ಞರು,ನಟರು, ಚಿಂತಕರು ಮತ್ತು ತಿರುಗಾಟದ ನಟನಟಿ ತಂತ್ರಜ್ಞರು, ನೀನಾಸಮ್ ರಂಗಶಿಕ್ಷಣ ಕೇಂದ್ರ, ನೀನಾಸಮ್ ಬಳಗ ಮತ್ತು ಮುಖ್ಯವಾಗಿ ನಮ್ಮ ತಂಡದ ಅನೇಕ ಹಳೆಯ ವಿದ್ಯಾರ್ಥಿ ಮಿತ್ರರು ಮುಂತಾಗಿ ಅನೇಕಾನೇಕರಿಗೆ ತಿರುಗಾಟವು ಕೃತಜ್ಞವಾಗಿದೆ.

ಅಲ್ಲದೆ, ಪ್ರಸ್ತುತ ವರ್ಷ ಮಾತ್ರವಲ್ಲದೆ ಕಳೆದ ಇಪ್ಪತ್ತಾರು ವರ್ಷಗಳಿಂದಲೂ ನಮ್ಮ ಸಂಸ್ಥೆಯ ಹಿತೈಷಿ ಮಿತ್ರರಾಗಿ 'ತಿರುಗಾಟ' ಪ್ರದರ್ಶನಗಳನ್ನು ತಮ್ಮ ತಮ್ಮ ಊರುಗಳಲ್ಲಿ ವ್ಯವಸ್ಥಿತವಾಗಿ ಪ್ರದರ್ಶಿಸುತ್ತಿರುವ ಮತ್ತು ಹಾಗೆ 'ತಿರುಗಾಟ'ದ ಪೋಷಕರಾಗಿರುವ ಕರ್ನಾಟಕ ಆದ್ಯಂತವಿರುವ ನಮ್ಮ ಪ್ರಾಯೋಜಕ ಬಳಗಕ್ಕೆ (ವ್ಯಕ್ತಿ-ಸಂಸ್ಥೆಗಳಿಗೆ) 'ತಿರುಗಾಟ'ವು ವಿಶೇಷವಾಗಿ ಋಣಿಯಾಗಿದೆ.

**೭. ನೀನಾಸಮ್ ಸಂಸ್ಕೃತಿ ಶಿಬಿರ:**

ಈ ಸಾಲಿನ ಸಂಸ್ಕೃತಿ ಶಿಬಿರವು ಇದೇ ಅಕ್ಟೋಬರ್ ೩ರಿಂದ ೯ರವರೆಗೆ ಒಂದು ವಾರ ಕಾಲ ನಡೆಯಿತು. 'ಹೊಸ ತಲೆಮಾರು: ಅಪೇಕ್ಷೆಗಳು ಮತ್ತು ಆತಂಕಗಳು' ಎಂಬ ವಿಷಯವನ್ನು ಕೇಂದ್ರವಾಗಿಟ್ಟು ಕೊಂಡು ಶಿಬಿರದ ಪ್ರಮುಖ ಉಪನ್ಯಾಸ - ಚರ್ಚೆ - ಗೋಷ್ಠಿಗಳು ನಡೆದವು. ಡಾ. ಯು.ಆರ್. ಅನಂತಮೂರ್ತಿಯವರು ಶಿಬಿರದ ನಿರ್ದೇಶಕರಾಗಿದ್ದರು. ಶ್ರೀಯುತರಾದ ಸಮೀಕ್ ಬಂದೋಪಾಧ್ಯಾಯ, ಶಿವ ವಿಶ್ವನಾಥನ್, ಓ.ಎಲ್. ನಾಗಭೂಷಣಸ್ವಾಮಿ, ಮನು ಚಕ್ರವರ್ತಿ, ರಜನಿ ಭಕ್ಷಿ, ವೈದೇಹಿ, ಸುಂದರ ಸಾರುಕ್ಕೈ, ಗೋಪಾಲ ಗುರು, ಅತುಲ್ ತಿವಾರಿ, ವಿವೇಕ ಶಾನಭಾಗ, ಪ್ರಕಾಶ ಬೆಳವಾಡಿ, ಟಿ.ಎಂ.ಕೃಷ್ಣ ಮೊದಲಾದವರು ಸಂಪನ್ಮೂಲ ವ್ಯಕ್ತಿಗಳಾಗಿ ಶಿಬಿರವನ್ನು ನಡೆಸಿಕೊಟ್ಟರು. ಯುವ ಕವಿಗಳು ಮತ್ತು ಕತೆಗಾರರ ಜೊತೆಗಿನ ಸಂವಾದ ಕಾರ್ಯಕ್ರಮಗಳಲ್ಲಿ ಜ.ನಾ.ತೇಜಶ್ರೀ, ಆರಾಫ್ ರಾಜಾ, ಫೀನಿಕ್ಸ್ ರವಿ, ರಾಮ ಗಣೇಶ ಕಮತಂ, ಅಸಾರಾಮ್ ಲೋಮ್ಟೆ, ರಘುನಾಥ ಚ.ಹ., ಅನಿಂದಿತಾ ಸೇನಗುಪ್ತಾ ಮೊದಲಾದವರು ಭಾಗವಹಿಸಿದರು. ಪ್ರತಿದಿನ ಸಂಜೆ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳು: ದಿನಾಂಕ ೩ ಮತ್ತು ೪ರಂದು ನೀನಾಸಮ್ ತಿರುಗಾಟದ ನಾಟಕಗಳು — 'ಶೂದ್ರ ತಪಸ್ವಿ' (ರಚನೆ: ಕುವೆಂಪು, ನಿ: ಮಂಜುನಾಥ ಎಲ್. ಬಡಿಗೇರ) ಮತ್ತು 'ಒಥೆಲೋ' (ಶೇಕ್ಸ್‌ಪಿಯರ್ ಅನುವಾದ: ಕೆ.ಎಸ್. ನಿಸಾರ್ ಅಹಮದ್, ನಿ: ಜಹಾನ್ ಮಣೇಕ್ ಶಾ), ದಿ. ೫ರಂದು ನೀನಾಸಮ್ ಬಳಗದ ನಾಟಕ 'ಅಗಲಿದ ಅಲಕೆ' (ಕಾಳಿದಾಸನ ಕೃತಿಗಳನ್ನು ಆಧರಿಸಿ, ನಿ: ಬಿ.ಆರ್. ವೆಂಕಟರಮಣ ಐತಾಳ), ದಿ. ೬ರಂದು ವಿ।ಟಿ.ಎಂ. ಕೃಷ್ಣ ಅವರಿಂದ ಕರ್ನಾಟಕಿ ಸಂಗೀತ, ದಿ. ೭ರಂದು ಪಂ। ನಾಗಭೂಷಣ ಹೆಗಡೆಯವರಿಂದ ಹಿಂದುಸ್ತಾನಿ ಗಾಯನ, ದಿ. ೮ರಂದು ಪರ್ಚ್, ಚೆನ್ನೈ ತಂಡದವರಿಂದ ನಾಟಕ 'ಮಿಸ್ ಮೀನಾ' (ನಿ: ರಾಜೀವ ಕೃಷ್ಣನ್) ಮತ್ತು ದಿ. ೯ರಂದು ವಿ। ವೈಜಯಂತಿ ಕಾಶಿ ಮತ್ತು ತಂಡದವರಿಂದ ಶಾಸ್ತ್ರೀಯ ನೃತ್ಯ. ಇವಲ್ಲದೆ, ಮೂರುದಿನ ಅಪರಾಹ್ನದ ಹೊತ್ತು 'ಊರುಕೇರಿ' (ಡಾ. ಸಿದ್ದಲಿಂಗಯ್ಯನವರ ಆತ್ಮಕತೆಯ ರಂಗರೂಪ, ಜನಮನದಾಟ ತಂಡ, ನಿ: ಗಣೇಶ ಎಂ.), 'ಕಿ.ರಾ. ಕೊಳಂಬು' (ಪರ್ಚ್ ಚೆನ್ನೈ ತಂಡ)ಮತ್ತು 'ಕೋಪನ್ ಹೇಗನ್' (ಸೆಂಟರ್ ಫಾರ್ ಫಿಲ್ಮ್ ಅ್ಯಂಡ್ ಡ್ರಾಮಾ, ನಿ: ಪ್ರಕಾಶ ಬೆಳವಾಡಿ) ಎಂಬ ಮೂರು ಬೇರೆ ಬೇರೆ ನಾಟಕಗಳ ಪ್ರದರ್ಶನಗಳು ನಡೆದವು. ಪ್ರತಿದಿನ ಸಂಜೆ ಮುಂಜಾನೆಗಳಲ್ಲಿ ಆಸಕ್ತರಿಗಾಗಿ ಎ.ಎನ್. ಮುಕುಂದ್, ಕೆ.ಎಸ್. ರಾಜಾರಾಮ ಇವರುಗಳು ಛಾಯಾಗ್ರಹಣದ ಕುರಿತು ಹಾಗೂ ಚನ್ನಕೇಶವ, ಚರಣ ಇವರುಗಳು ರಂಗ-ಚಲನೆಗಳ ಕುರಿತು ತರಗತಿಗಳನ್ನು ನಡೆಸಿಕೊಟ್ಟರು.

ಒಟ್ಟು ಈ ಶಿಬಿರದಲ್ಲಿ ಶಿಬಿರಾರ್ಥಿಗಳು ೧೭೦ ಮಂದಿ ಭಾಗವಹಿಸಿದ್ದರು. ಗಂಡಸರು ೯೦ ಮಂದಿ ಹೆಂಗಸರು ೮೦ ಮಂದಿ ಇವರುಗಳಲ್ಲಿ ವಿದ್ಯಾರ್ಥಿಗಳು ೭೦, ಇವರಲ್ಲಿ ಹುಡುಗರು ೪೦, ಹುಡುಗಿಯರು ೩೦. ಇವರಲ್ಲದೆ ಶಿಕ್ಷಕರು, ೨೫, ನೌಕರರು ೧೫, ಪತ್ರಕರ್ತರು ೪, ವೈದ್ಯರು ೩, ನಿವೃತ್ತ ನೌಕರರು ೬, ಫಿಲ್ಮ್ ಮೇಕರ್ಸ್‌ಗಳು ೪ ಮತ್ತು ಸ್ವಯಂ ಸೇವಾ ಕಾರ್ಯಕರ್ತರು ೧೨ ಜನ.

೮. ಇತರೆ ವಿಶೇಷ ಕಾರ್ಯಕ್ರಮಗಳು:

**ದಿ.ಕೆ.ವಿ. ಸುಬ್ಬಣ್ಣನವರ ನೆನಪಿನ ಕಾರ್ಯಕ್ರಮ:** ೨೦೧೧ರ ಜುಲೈ ೧೬ಕ್ಕೆ ಸುಬ್ಬಣ್ಣನವರು ತೀರಿಕೊಂಡು ಐದು ವರ್ಷಗಳಾದವು. ಪ್ರತಿ ವರ್ಷವೂ ಈ ದಿನ ಕಾಲೇಜಿನ ವಿದ್ಯಾರ್ಥಿಗಳಿಗಾಗಿ ಪ್ರಸಕ್ತ ವಿಷಯಗಳ ಕುರಿತು ವಿಚಾರಗೋಷ್ಠಿಗಳನ್ನು ನಡೆಸಲಾಗುತ್ತಿತ್ತು. ಈ ಬಾರಿ ಒಂದು ವಿಶೇಷ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಪ್ರಸಿದ್ಧ ವಿದ್ವಾಂಸರಾದ ಪ್ರೊ। ಉಮಾಕಾಂತ ಭಟ್ ಕೆರೆಕೈ ಇವರು 'ಕಾಲಿದಾಸ - ಅಭಿಜ್ಞಾನ' ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು. ಶ್ರೀಯುತರಾದ ಪ್ರಕಾಶ ಬೆಳವಾಡಿ, ಕೆ.ಎಸ್. ರಾಜಾರಾಮ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹನಿರ್ದೇಶಕರಾದ ಶ್ರೀ ಎನ್. ಹರಿಕುಮಾರ್ ಮೊದಲಾದವರು ಉಪಸ್ಥಿತರಿದ್ದರು. ಅಂದು ಸಂಜೆ ನೀನಾಸಮ್ ಬಳಗದವರಿಂದ 'ಅಗಲಿದ ಅಲಕೆ' ಎಂಬ ನಾಟಕದ ಪ್ರದರ್ಶನ ನಡೆಯಿತು.

**ನೀನಾಸಮ್ ನಾಟಕ:** ನೀನಾಸಮ್ ಬಳಗವು ಪ್ರತಿ ವರ್ಷದಂತೆ ಈ ಸಾಲಿನಲ್ಲಿಯೂ ಊರಿನ ಹಿರಿ ಕಿರಿಯ ಆಸಕ್ತರನ್ನು ಒಗ್ಗೂಡಿಸಿ 'ಅಗಲಿದ ಅಲಕೆ' ಎಂಬ ನಾಟಕವನ್ನು ಸಿದ್ಧಪಡಿಸಿದೆ (ರಂಗಪಠ್ಯ ಮತ್ತು ನಿರ್ದೇಶನ: ಬಿ.ಆರ್. ವೆಂಕಟರಮಣ ಐತಾಳ). ಕಾಲಿದಾಸನ ಕಾವ್ಯ - ನಾಟಕಗಳಲ್ಲಿ ಬರುವ ವಿಯೋಗದ ಕಥನಗಳನ್ನು ಒಂದೆಡೆ ಸೇರಿಸಿ ಈ ನಾಟಕವನ್ನು ಕಟ್ಟಲಾಗಿದೆ. ಇದರ ಮೊದಲ ಪ್ರದರ್ಶನಗಳು ದಿ.ಕೆ.ವಿ. ಸುಬ್ಬಣ್ಣ ನವರ ನೆನಪಿನ ಕಾರ್ಯಕ್ರಮಗಳ ಅಂಗವಾಗಿ ಜುಲೈ ೧೬ ಮತ್ತು ೧೭, ೨೦೧೧ರಂದು ಹೆಗ್ಗೋಡಿನ ಶಿವರಾಮ ಕಾರಂತ ರಂಗಮಂದಿರದಲ್ಲಿ ನಡೆದವು. ಅನಂತರ, ಜುಲೈ ೨೮ರಂದು ಧಾರವಾಡದಲ್ಲಿ ದಿ. ಕೀರ್ತಿನಾಥ ಕುರ್ತಕೋಟಿಯವರ ನೆನಪಿನ ಕಾರ್ಯಕ್ರಮಗಳ ಸಂದರ್ಭದಲ್ಲಿಯೂ ಪ್ರದರ್ಶಿಸಲಾಯಿತು. ಬಾಬುಕೋಡಿ ಪ್ರತಿಷ್ಠಾನವು ದಿ.ಬಿ.ವಿ. ಕಾರಂತರ ನೆನಪಿಗಾಗಿ ಮೈಸೂರಿನಲ್ಲಿ ನಡೆಸುವ ನಾಟಕೋತ್ಸವದಲ್ಲಿ ಸೆಪ್ಟೆಂಬರ್ ೨೭ರಂದು ಮೈಸೂರಿನಲ್ಲಿ ಮತ್ತು ಅಕ್ಟೋಬರ್ ೫ರಂದು ನೀನಾಸಮ್ ಸಂಸ್ಕೃತಿ ಶಿಬಿರದಲ್ಲಿ ಮತ್ತೆ ಹೆಗ್ಗೋಡಿನಲ್ಲಿಯೂ ಈ ನಾಟಕದ ಮರುಪ್ರದರ್ಶನಗಳು ನಡೆಯಲಿವೆ.

**ತಾಳಮದ್ದಲೆ ಗೋಷ್ಠಿ:** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಶಿವಮೊಗ್ಗ ಇವರ ಸಹಯೋಗದೊಂದಿಗೆ ನೀನಾಸಮ್ ತಿರುಗಾಟದ ಸದಸ್ಯರು, ರಂಗಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳು ಹಾಗೂ ಇತರ ಆಸಕ್ತರಿಗಾಗಿ ಜುಲೈ ೨೯ರಿಂದ ೩೧ರವರೆಗೆ ಮೂರು ದಿನಗಳ ಕಾಲ ತಾಳಮದ್ದಲೆ ಗೋಷ್ಠಿ ಹಾಗೂ ಪ್ರದರ್ಶನಗಳನ್ನು ನಡೆಸಲಾಯಿತು. ಆಹ್ವಾನಿತ ಕಲಾವಿದರು ಭೀಷ್ಮವಿಜಯ, ತಾಮ್ರಧ್ವಜ ಕಾಳಗ, ಪಾದುಕಾಪ್ರದಾನ,

ಕೃಷ್ಣಸಂಧಾನ, ಶಂಭೂಕ ವಧೆ ಮುಂತಾದ ಪ್ರಸಂಗಗಳನ್ನು ಸಂಜೆಯ ಮತ್ತು ಬೆಳಗಿನ ಕಾರ್ಯಕ್ರಮಗಳಲ್ಲಿ ಪ್ರಸ್ತುತಪಡಿಸಿದರು. ಕಲಾವಿದರಾಗಿ ಹಿಮ್ಮೇಳದಲ್ಲಿ ಭಾಗವತ ಶ್ರೀ ಐನಬೈಲ್ ಪರಮೇಶ್ವರ ಹೆಗಡೆ, ಶ್ರೀ ಕೆ.ಎಸ್. ನಾಗಭೂಷಣ, ಶ್ರೀ ಭಾರ್ಗವ ಹಾಗೂ ಅರ್ಥಧಾರಿಗಳಾಗಿ ಡಾ। ಎಂ. ಪ್ರಭಾಕರ ಜೋಶಿ, ಪ್ರೊ। ಉಮಾಕಾಂತ ಭಟ್ಟ, ಶ್ರೀ ವಾಸುದೇವ ರಂಗ ಭಟ್ಟ ಮತ್ತು ಶ್ರೀ ಬೋಳಂತಮೊಗರು ಹರೀಶ ಇವರು ಈ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು.

**ನೀನಾಸಮ್ ಪ್ರತಿಷ್ಠಾನವಿಶೇಷ ಉಪನ್ಯಾಸ ಮಾಲಿಕೆ**

ನೀನಾಸಮ್ ಪ್ರತಿಷ್ಠಾನವು ಆಗಾಗ ಹಿರಿಯ ವಿದ್ವಾಂಸರಿಂದ ಚಿಂತಕರಿಂದ ವಿಶೇಷ ಉಪನ್ಯಾಸಗಳ ಕಾರ್ಯಕ್ರಮಗಳನ್ನು ನಡೆಸುತ್ತ ಬಂದಿದೆ. ಈ ಹಿಂದೆ ಪ್ರೊ. ವಲಿಯಾಥನ್, ಪ್ರೊ. ಮಾರ್ಕ್ ಲಿಂಡ್‌ಲೇ, ಡಾ। ಕೆ.ಡಿ. ತ್ರಿಪಾಠಿ, ಡಾ। ಟಿ.ಆರ್. ಎಸ್. ಶರ್ಮ, ಡಾ। ರಾಮಚಂದ್ರ ಗುಹಾ, ಪ್ರೊ. ಉಮಾಕಾಂತ ಭಟ್ ಮೊದಲಾದ ಗಣ್ಯರು ಈ ಉಪನ್ಯಾಸಗಳನ್ನು ನಡೆಸಿಕೊಟ್ಟಿದ್ದರು. ಈ ಸಾಲಿನಲ್ಲಿ ೨೦೧೧ರ ಮಾರ್ಚ್ ೨೯ರಿಂದ ೩೧ ರವರೆಗೆ ಮೂರು ದಿನಗಳ ಕಾಲ ಪ್ರಸಿದ್ಧ ವಿದ್ವಾಂಸರಾದ ಶ್ರೀ ಲಕ್ಷ್ಮೀಶ ತೋಳ್ಪಾಡಿಯವರಿಂದ ಉಪನ್ಯಾಸ ಮಾಲಿಕೆಯನ್ನು ಏರ್ಪಡಿಸಲಾಗಿತ್ತು. ಈ ಸಂದರ್ಭದಲ್ಲಿ ಶ್ರೀ ಲಕ್ಷ್ಮೀಶ ತೋಳ್ಪಾಡಿಯವರು ರಾಮಾಯಣ ಮತ್ತು ಮಹಾಭಾರತಗಳ ಕುರಿತು ವಿಶೇಷ ಹೊಳಹು ಮತ್ತು ಒಳನೋಟಗಳಿಂದ ಕೂಡಿದ ಉಪನ್ಯಾಸಗಳನ್ನು ನೀಡಿದರು.

**ನೀನಾಸಮ್ ಅನುಸಂಧಾನ ಯೋಜನೆ**

ಹಿಂದೊಮ್ಮೆ ನೀನಾಸಮ್ ಶಿವಮೊಗ್ಗ ಜಿಲ್ಲೆಯ ಕೆಲವು ಕಾಲೇಜುಗಳ ಆಯ್ದ ವಿದ್ಯಾರ್ಥಿಗಳಿಗಾಗಿ, ಆಯಾಯಾ ಕಾಲೇಜುಗಳಲ್ಲಿಯೆ, ವಿವಿಧ ಕಲೆಗಳ ಬಗೆಗಿನ ರಸಗ್ರಹಣ ಶಿಬಿರಗಳನ್ನು ಆಯೋಜಿಸಿತ್ತು. ಅಂತಹದೇ ಇನ್ನೊಂದು ಪ್ರಯತ್ನವನ್ನು ಈ ಬಾರಿ ಹೆಗ್ಗೋಡಿನ ರೂಪಶ್ರೀ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗಾಗಿ ಆಯೋಜಿಸಿತ್ತು. ಈ ಕಾಲೇಜಿನ ಆಯ್ದ ಐವತ್ತು ಮಂದಿ ವಿದ್ಯಾರ್ಥಿಗಳಿಗೆ ರಂಗಶಿಕ್ಷಣ ಕೇಂದ್ರದ ಅಧ್ಯಾಪಕರು ಹಾಗೂ ಕೆಲವುಮಂದಿ ಆಹ್ವಾನಿತ ಅತಿಥಿ ಕಲಾವಿದರು ವಿವಿಧ ಕಲಾಪ್ರಕಾರಗಳ ಕುರಿತು ತರಗತಿಗಳನ್ನು ನಡೆಸಿದರು. ಶಿಬಿರಾರ್ಥಿಗಳು ಕೊನೆಯಲ್ಲಿ ಒಂದು ಕಿರುನಾಟಕವನ್ನೂ ಪ್ರಯೋಗಿಸಿದರು. ವರ್ಷಾಂತ್ಯದಲ್ಲಿ ನಡೆಸಿದ ಮುಕ್ತಾಯ ಸಮಾರಂಭದಲ್ಲಿ ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಬಿ.ವಿ. ರಾಜಾರಾಮ ಅವರು ಶಿಬಿರಾರ್ಥಿಗಳಿಗೆ ಸಾಕ್ಷ್ಯಪತ್ರಗಳನ್ನು ನೀಡಿ ರಂಗಮಾಧ್ಯಮದ ವಿಶೇಷತೆಗಳ ಕುರಿತು ಮಾತನಾಡಿದರು.

**ಊರು ಮನೆ ಉತ್ಸವ:**

ಕಳೆದ ಮೂರು-ನಾಲ್ಕು ವರ್ಷಗಳಿಂದ ನೀನಾಸಮ್ ಫೆಬ್ರವರಿ-ಮಾರ್ಚ್ ಹೊತ್ತಿಗೆ, ಹೆಗ್ಗೋಡು ಸುತ್ತಮುತ್ತಲ ಊರಿನ ಸ್ಥಳೀಯ ಕಲಾವಿದರ ಅಭಿವ್ಯಕ್ತಿಗಾಗಿ ವೇದಿಕೆ ರೂಪಿಸುವ ಉದ್ದೇಶದಿಂದ ಊರುಮನೆ ಉತ್ಸವ ಎಂಬ ಕಾರ್ಯಕ್ರಮವನ್ನು ನಡೆಸುತ್ತಿದೆ. ಈ ಸಂದರ್ಭದಲ್ಲಿ ಊರುಮನೆಯವರು ಹಲವು ಬಗೆಯ ಜಾನಪದ - ಸಾಂಪ್ರದಾಯಿಕ ಹಾಡು - ಹಸೆ - ನಾಟಕ ಮುಂತಾದವನ್ನು ಪ್ರದರ್ಶಿಸುತ್ತಾರೆ. ಈ ಸಾಲಿನ ಊರುಮನೆ ಉತ್ಸವವು ೨೦೧೧ರ ಮಾರ್ಚ್ ೫ರಿಂದ ೮ರವರೆಗೆ ನಡೆಯಿತು. ದಿನಾಂಕ ೫ರ ಸಂಜೆ ಈಟಿವಿ-ಕನ್ನಡದ ಮುಖ್ಯಸ್ಥರಾದ ಶ್ರೀ ಪವನಕುಮಾರ ಮಾನ್ವಿಯವರು ದೀಪ ಬೆಳಗಿ ಕಾರ್ಯಕ್ರಮಗಳ ಉದ್ಘಾಟನೆ ಮಾಡಿದರು. ಅವತ್ತು, ಕೆರೆಹಳ್ಳಿಯ ಕುಣಬಿ ಜನಾಂಗದ ಶ್ರೀಯುತ ಶಾಂತಮೂರ್ತಿ ಮತ್ತು ತಂಡದವರಿಂದ ಕುಣಬಿ ನೃತ್ಯ, ಚಂದನಬಾಬು ಮತ್ತು ಶೌರಿ ಕಾಶಿಯವರಿಂದ ಲಘುಸಂಗೀತ, ತೇಜಸ್ವಿ ಮಹಿಳಾ ಮಂಡಳಿಯವರಿಂದ ಸುಗಮ ಸಂಗೀತ ಹಾಗೂ ನಮ್ಮಂಪ್ಲಿ ಹೆಬ್ಬೈಲು ತಂಡದವರಿಂದ 'ಬಣ್ಣದ ಗುಬ್ಬಾರು ಮಳೆರಾಜ' (ರಚನೆ ಮತ್ತು ನಿರ್ದೇಶನ: ಮಹದೇವ ಹಡಪದ) ಎಂಬ ನಾಟಕ ಪ್ರದರ್ಶನ; ದಿ. ೬ರಂದು ಟಾಡ್ ಲಾರಿಚ್ ಪುರಪ್ಪೆಮನೆ ಇವರಿಂದ ಸಿತಾರ್ ವಾದನ ಮತ್ತು ಸದಭಿರುಚಿ ಬಳಗ ನಂದೀತಳೆ ತಂಡದವರಿಂದ 'ದಿ ಡೇ ಆ್ಯಂಡ್ ನೈಟ್ ಇನ್ ಮಾಲ್ಗುಡಿ' (ಆರ್.ಕೆ. ನಾರಾಯಣರ ಕಥೆ ಆಧರಿಸಿ; ನಿ: ಹರ್ಷ ಉಳ್ಳೂರು) ನಾಟಕ ಪ್ರದರ್ಶನ; ದಿ. ೭ರಂದು ಶ್ರೀಮತಿ ಅನಿತಾ ವೆಂಕಟೇಶ ನಂದೀತಳೆ ಇವರಿಂದ ಕರ್ನಾಟಕಿ ಶಾಸ್ತ್ರೀಯ ಸಂಗೀತ ಮತ್ತು ಶ್ರೀ ಲಲಿತಕಲಾ ಸಂಘ ಭೀಮನಕೋಣೆ ತಂಡದವರಿಂದ 'ಯಮ್ಮನೆ ಕಥೆ' (ರಚನೆ: ಇಡೀ ತಂಡದವರಿಂದ ಆಶುವಿಸ್ತರಣೆಯಾಗಿ; ನಿ: ಮಂಜು ಕೊಡಗು) ನಾಟಕ ಪ್ರದರ್ಶನ, ದಿ. ೮ರಂದು ಸ್ಕಂದ ನೃತ್ಯಶಾಲೆ ಹೆಗ್ಗೋಡು ಇವರಿಂದ ಭರತನಾಟ್ಯ ಮತ್ತು ಸುತ್ತಾಮುತ್ತಾ ಸಮೂಹ ಗಡಿಕಟ್ಟೆ ತಂಡದವರಿಂದ 'ಹಿಡಿಂಬನ ಕಾಡು - ಬಕನ ನಾಡು' (ಕುಮಾರವ್ಯಾಸ ಭಾರತವನ್ನು ಆಧರಿಸಿ; ನಿ: ಬಿ.ಆರ್. ವೆಂಕಟರಮಣ ಐತಾಳ) — ಮೊದಲಾದ ಕಾರ್ಯಕ್ರಮಗಳು ನಡೆದವು. ಪ್ರತಿದಿನ ಭೀಮನಕೋಣೆ, ಶೆಡ್ತಿಕೆರೆ, ಹೆಬ್ಬರಿಗೆ, ಪುರಪ್ಪೆಮನೆ ಪ್ರಾಥಮಿಕ ಶಾಲೆಗಳು ಹಾಗೂ ಹೊಂಗಿರಣ ಶಾಲೆಯ ಮಕ್ಕಳಿಂದ ಚಿತ್ರಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಈ ವರ್ಷದ ಉತ್ಸವದಲ್ಲಿ ಸುಮಾರು ೧೫೦ ಮಂದಿ ಕಲಾವಿದರು ವಿವಿಧ ಕಾರ್ಯಕ್ರಮಗಳನ್ನು ನೀಡಿದರು.

ನೀನಾಸಮ್ ಪ್ರತಿಷ್ಠಾನ:

೧೯೯೧ರಲ್ಲಿ ಶ್ರೀ ಕೆ.ವಿ. ಸುಬ್ಬಣ್ಣನವರಿಗೆ ಮ್ಯಾಗ್ಸೆಸೆ ಪ್ರಶಸ್ತಿ ದೊರೆತಾಗ ಆ ಮೊಬಗನ್ನು ಇಡುಗಂಟಾಗಿಟ್ಟು 'ನೀನಾಸಮ್ ಪ್ರತಿಷ್ಠಾನ'ವೆಂಬ ಟ್ರಸ್ಟ್ ನ್ನು ಸ್ಥಾಪಿಸಲಾಯಿತು. ಇದು ನೀನಾಸಮ್ ಸಂಸ್ಥೆಯ ಉದ್ದೇಶ ಚಟುವಟಿಕೆಗಳಿಗೆ ಪೋಷಕವಾಗಿ ಸಂಘಟಿಸಿರಪೋಷಕ ಸಹಸಂಸ್ಥೆಯಾಗಿದೆ. ಕಳೆದ ಹತ್ತೊಂಬತ್ತು ವರ್ಷಗಳಲ್ಲಿ ಈ ಸಂಸ್ಥೆಯು ಕರ್ನಾಟಕದ ವಿವಿಧ ಭಾಗಗಳಲ್ಲಿ ಒಂದು ಎರಡು ಮೂರು ದಿನಗಳ ಸಾಹಿತ್ಯ ಸಂಸ್ಕೃತಿ ಶಿಬಿರಗಳನ್ನು ನಡೆಸುತ್ತ ಬಂದಿದೆ ಮತ್ತು ಈ ಕಾರ್ಯಕ್ರಮವು ಕರ್ನಾಟಕದ ಎಲ್ಲ ಕಡೆ ಯಶಸ್ವಿಯೂ ಜನಪ್ರಿಯವೂ ಆಗಿದೆ. ಶ್ರೀ ಟಿ.ಪಿ. ಅಶೋಕ ಅವರು ಈ ಕಾರ್ಯಕ್ರಮದ ನೇತೃತ್ವವಹಿಸಿದ್ದಾರೆ.

**ಅಕ್ಷರ ಟ್ರಸ್ಟ್ ಮತ್ತು ಪ್ರಕಾಶನ:**

೧೯೫೮ರಲ್ಲಿ ಕನ್ನಡ ಗ್ರಂಥ ಪ್ರಕಾಶನ ಸಂಸ್ಥೆಯಾಗಿ ಸ್ಥಾಪನೆಗೊಂಡು ಮುಂದೆ ೧೯೭೫ರಲ್ಲಿ ಅಕ್ಷರ ಟ್ರಸ್ಟ್ ಮತ್ತು ಪ್ರಕಾಶನ ಎಂಬ ಹೆಸರಿನಲ್ಲಿ ಟ್ರಸ್ಟ್ ಆಗಿ ನೋಂದಾವಣೆಗೊಂಡಿರುವ ಈ ಪುಸ್ತಕ ಪ್ರಕಟಣ ಸಂಸ್ಥೆಯು ನೀನಾಸಮ್ ನ ಉದ್ದೇಶ ಚಟುವಟಿಕೆಗಳಲ್ಲಿ ಪಾಲುಗೊಂಡು ಸಹಾಯಕವಾಗಿ ಕೆಲಸ ಮಾಡುತ್ತ ಬಂದಿದೆ. ಇದು ಕೂಡಾ ನೀನಾಸಮ್‌ಗೆ ಹೊಂದಿಕೊಂಡಿರುವ ಸಹಸಂಸ್ಥೆಯಾಗಿದೆ.

ಮುಂಗಡ ಪತ್ರ ೨೦೧೦-೧೧:

ಆಡಳಿತ ಮಂಡಳಿಯು ಕೆಳಕಂಡಂತೆ ೨೦೧೧-೧೨ನೇ ಸಾಲಿನ ಆದಾಯ ವೆಚ್ಚ ಮುಂಗಡ ಪತ್ರವನ್ನು ರೂಪಿಸಿ ಸಕಲ ಸದಸ್ಯ ಸಭೆಯಲ್ಲಿ ಮಂಜೂರಾತಿಗಾಗಿ ಮಂಡಿಸುತ್ತಿದೆ

| ಅಂದಾಜು ಆದಾಯ | | ನಿರೀಕ್ಷಿತ ವೆಚ್ಚ | |
|---|---|---|---|
| ೧. ಧನ ಸಹಾಯ | | ೧. ಶಾಖೆ/ಪ್ರಾಜೆಕ್ಟ್ | |
| ೧) ನೀನಾಸಮಾ ರಂಗಶಿಕ್ಷಣ ಕೇಂದ್ರ | ೩೦,೦೦,೦೦೦-೦೦ | ೧) ನೀನಾಸಮಾ ರಂಗಶಿಕ್ಷಣ ಕೇಂದ್ರ | ೩೦,೦೦,೦೦೦-೦೦ |
| ೨) ನೀನಾಸಮ್ ತಿರುಗಾಟ | ೧೫,೦೦,೦೦೦-೦೦ | ೨) ನೀನಾಸಮ್ ತಿರುಗಾಟ | ೧೫೦೦,೦೦೦-೦೦ |
| ೩) ಹಿವೋಸ್ | ೮,೫೦,೦೦೦-೦೦ | ೩) ಹಿವೋಸ್ | ೮,೫೦,೦೦೦-೦೦ |
| ೪) ಎಸ್‌ಆರ್‌ಟಿಟಿ/ಐಎಫ್‌ಎ | ೪೦,೦೦,೦೦೦-೦೦ | ೪) ಇಕ್ಸ್‌ಟೆನ್‌ಷನ್ ಪ್ರಾಜೆಕ್ಟ್ | ೮,೦೦,೦೦೦-೦೦ |
| ೫) ಸಿಎಸ್‌ಸಿಎಸ್/ಎಸ್‌ಆರ್‌ಟಿಟಿ | ೮,೦೦,೦೦೦-೦೦ | ೫) ಟಾಗೂರ್ ಪ್ರಾಜೆಕ್ಟ್ | ೭,೦೦,೦೦೦-೦೦ |
| ೫) ಐಜಿಎನ್‌ಒಯು | ೭,೦೦,೦೦೦-೦೦ | ೨. ಬ್ಯಾಂಕ್ ಕಮಿಷನ್ ಮತ್ತು ಬಡ್ಡಿ | ೧೦,೦೦೦-೦೦ |
| ೨. ಧರ್ಮ | ೧,೫೦,೦೦೦-೦೦ | ೩. ಕಂದಾಯ | ೧೦,೦೦೦-೦೦ |
| ೩. ಅಜೀವ ಸದಸ್ಯರ ವರ್ಗಣಿ | ೨೫,೦೦೦-೦೦ | ೪. ರಿಜಿಸ್ಟ್ರೇಷನ್ (ನೋಂದಣಿ) | ೧೦,೦೦೦-೦೦ |
| ೪. ರಂಗ ಮಂದಿರ ಸೇವಾ ಶುಲ್ಕ | ೧,೨೫,೦೦೦-೦೦ | ೫. ಅಂಚೆ ಮತ್ತು ದೂರವಾಣಿ | ೨೫,೦೦೦-೦೦ |
| ೫. ನಾಟಕ ಪ್ರದರ್ಶನ | ೫೦,೦೦೦-೦೦ | ೬. ಮುದ್ರಣ ಮತ್ತು ಸಾದಿಲ್ವಾರು | ೧೫,೦೦೦-೦೦ |
| ೬. ಬ್ಯಾಂಕ್ ಬಡ್ಡಿ | ೨೫,೦೦೦-೦೦ | ೭. ನಾಟಕ ತಯಾರಿ ಮತ್ತು ಪ್ರದರ್ಶನ | ೪೦,೦೦೦-೦೦ |
| ೭. ಇತರೆ | ೨೫,೦೦೦-೦೦ | ೮. ವೇತನ | ೬೦,೦೦೦-೦೦ |
| | | ೯. ಪ್ರಯಾಣ ವೆಚ್ಚ | ೨೦,೦೦೦-೦೦ |
| | | ೧೦. ಬಸ್ ನಿರ್ವಹಣೆ | ೧೫,೦೦೦-೦೦ |
| | | ೧೧. ಕಟ್ಟಡ ದುರಸ್ತಿ ಮತ್ತು ನಿರ್ವಹಣೆ | ೪೦,೦೦,೦೦೦-೦೦ |
| | | ೧೨. ಉಪಕರಣ | ೨೫,೦೦೦-೦೦ |
| | | ೧೩. ಆಡಿಟ್ | ೫,೦೦೦-೦೦ |
| | | ೧೪.ಅತಿಥಿ ಸತ್ಕಾರ | ೪೫,೦೦೦-೦೦ |
| | | ೧೫. ಮಹಾಸಭೆ | ೫,೦೦೦-೦೦ |
| | | ೧೬. ಇತರೆ | ೫,೦೦೦-೦೦ |
| | | ೧೭. ಸಹಾಯಧನ | |
| | | ೧. ರಂಗಶಿಕ್ಷಣ ಕೇಂದ್ರ ಸಹಾಯಧನ | ೨೫,೦೦೦-೦೦ |
| | | ೨. ಮಾತುಕತೆ ಸಹಾಯಧನ | ೨೦,೦೦೦-೦೦ |
| | | ೩. ತಿರುಗಾಟ ಸಹಾಯಧನ | ೨೦,೦೦೦-೦೦ |
| | | ೪. ಸಂಸ್ಕೃತಿ ಶಿಬಿರ ಸಹಾಯಧನ | ೧೦,೦೦೦-೦೦ |
| ಜುಮ್ಲಾ | ೧,೧೨,೦೦,೦೦೦-೦೦ | ಜುಮ್ಲಾ | ೧,೧೨,೦೦,೦೦೦-೦೦ |

**ಉಪಕಾರ ಸ್ಮರಣೆ**

ಕೇಂದ್ರ ಸರ್ಕಾರ ಮತ್ತು ಹಿವೋಸ್ ಇಂಡಿಯಾ ಸಂಸ್ಥೆ, ಬೆಂಗಳೂರು, ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್, ಬೆಂಗಳೂರು, ಜವಹರಲಾಲಾ ನೆಹರೂ ಉನ್ನತ ವಿಜ್ಞಾನ ಸಂಶೋಧನಾ ಕೇಂದ್ರ, ಬೆಂಗಳೂರು ಹಾಗೂ ರಾಜ್ಯಸರ್ಕಾರದಿಂದ ನಮ್ಮ ಗ್ರಾಮಪಂಚಾಯತಿ ವರೆಗಿನ ಆಡಳಿತ ಸಂಸ್ಥೆಗಳು, ಅನೇಕ ಸಾರ್ವಜನಿಕ ಖಾಸಗಿ ಸಂಸ್ಥೆಗಳು, ಕರ್ನಾಟಕ ಮತ್ತು ಭಾರತಗಳ ಹಾಗೂ ಹೊರಗಿನ ಅನೇಕಾನೇಕ ಗಣ್ಯ ವ್ಯಕ್ತಿಗಳು ಮುಂತಾಗಿ ನೀನಾಸಮ್ ಸ್ಮರಿಸಬೇಕಾದ ಉಪಕಾರಿಗಳ ಸಂಖ್ಯೆ ದೊಡ್ಡದು. ಈ ಎಲ್ಲರನ್ನೂ ಒಟ್ಟಾಗಿ ಸ್ಮರಿಸಿ, ಅವರೆಲ್ಲರಿಗೂ ನೀನಾಸಮ್‌ನ ಕೃತಜ್ಞತಾ ಸ್ಮರಣೆಯನ್ನು ಇಲ್ಲಿ ದಾಖಲಿಸುತ್ತೇನೆ. ಮುಖ್ಯವಾಗಿ ಹೆಗ್ಗೋಡು ಮತ್ತು ಸುತ್ತಣ ಗ್ರಾಮಸ್ಥರು ಹಾಗೂ ಇಲ್ಲಿನ ಎಲ್ಲಾ ಗ್ರಾಮಸಂಸ್ಥೆಗಳು ನೀನಾಸಮ್‌ನ್ನು ಪೋಷಿಸಿಕೊಂಡು ಬರುತ್ತಿರುವುದನ್ನು ಕೃತಜ್ಞತೆಯಿಂದ ನೆನೆಯುತ್ತ ಈ ವರದಿಯನ್ನು ಮುಗಿಸುತ್ತೇನೆ.
ಹೆಗ್ಗೋಡು

ಟಿ. ನಾರಾಯಣ ಭಟ್ಟ

ದಿನಾಂಕ: ೨೧-೦೮-೨೦೧೧ ಕಾರ್ಯದರ್ಶಿ, ಆಡಳಿತ ಮಂಡಳಿ ಪರವಾಗಿ